**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು-ಮಡಿಕೇರಿ**

**<u>ಎಸ್.ಸಿ ಸಂಖ್ಯೆಃ 78/2023</u>**

ಪ್ರಾಸಾಃ 7
ಚಾಸಾಃ 8

ಸಾಕ್ಷಿದಾರರ ಹೆಸರು: ಪರಮೇಶ್ವರಾಚಾರಿ

ತಂದೆಯ ಹೆಸರು : ಚಂದ್ರಾಚಾರಿ

ವಯಸ್ಸು : 34 ವರ್ಷ

ವೃತ್ತಿ : ಕಾರ್ಪೇಂಟರ್

ವಾಸ : ನಾಕಲಗೂಡು ಗ್ರಾಮ.

**ಸಾಕ್ಷಿಯನ್ನು ದಿನಾಂಕ 08-04-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ಈಗ ನಾನು ನೋಡುತ್ತಿರುವ ನಿಪಿ-4 ರ ದಾಖಲೆಯಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

2. ದಿನಾಂಕ 13-08-2022 ರಂದು ನಾನು ಮನೆಯಲ್ಲಿ ಇದ್ದಾಗ ಶನಿವಾರಸಂತೆ ಪೊಲೀಸರು ನನಗೆ ಫೋನ್ ಮಾಡಿ, ಪ್ರಾಸಾ-4 ರವರ ಮನೆಯ ಬಳಿ ಬರಲು ಹೇಳಿದ್ದು, ಅದರಂತೆ ನಾನು ಅಲ್ಲಿಗೆ ಹೋದಾಗ ಚಾಸಾ-1 ಹಾಗೂ ಪ್ರಾಸಾ-1 ಇದ್ದರು. ಚಾಸಾ-1 ಕಾಫಿ ಗಿಡದ ದೊಣ್ಣೆಯನ್ನು ಮನೆಯ ಒಳಗಡೆಯಿಂದ ತಂದು ಅದೇ ದೊಣ್ಣೆಯಿಂದ ಆರೋಪಿ ಬಸವರಾಜು ತನಗೆ ಹಲ್ಲೆ ಮಾಡಿದ್ದರು ಎಂದು ಹೇಳಿ ಹಾಜರುಪಡಿಸಿದ್ದ ಮೇರೆಗೆ ಪೊಲೀಸರು ಅದನ್ನು ಅಮಾನತ್ತುಪಡಿಸಿಕೊಂಡರು. ಆ ಸಂದರ್ಭದಲ್ಲಿ ಪೊಲೀಸರು ಮಹಜರ್ ತಯಾರಿಸಿದ್ದು, ಮಹಜರ್ ನ್ನು 2.00 ಗಂಟೆಯಿಂದ 3.00

ಗಂಟೆಯವರೆಗೆ ಬರೆಯಲಾಯಿತು. ನಿಪಿ-4 ರ ಸಂದರ್ಭದಲ್ಲಿ ಪೊಲೀಸರು ಫೋಟೊಗಳನ್ನು ತೆಗೆದಿದ್ದು, ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ನನ್ನಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು,ಮಾ-1 ಎಂದು ಗುರುತಿಸಲಾಗಿದೆ.

**<u>ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ ಸಿ.ಎಸ್.ಪಿ. ವಕೀಲರಿಂದಃ</u>**

ಪ್ರತಿ ಪ್ರಕರಣ ಇದ್ದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು .

**<u>ಪಾಟೀಸವಾಲು- 5 ನೇ ಆರೋಪಿತರ ಪರವಾಗಿ ಶ್ರೀ ಪಿ.ಕೆ.ಎಂ. ವಕೀಲರಿಂದಃ</u>**

ಪ್ರತಿ ಪ್ರಕರಣ ಇದ್ದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು .

**<u>ಪಾಟೀಸವಾಲು- 6 ಮತ್ತು 7 ನೇ ಆರೋಪಿತರ ಪರವಾಗಿ ಶ್ರೀ ಡಿ.ಡಿ.ಸಿ ವಕೀಲರಿಂದಃ</u>**

ಪ್ರತಿ ಪ್ರಕರಣ ಇದ್ದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ